ಕೊಟ್ಟವರು. ಆ ನಿರ್ದೇಶಕರೇ ಅಷ್ಟೊಂದು ಕಾಯುತ್ತಿರಬೇಕಾದರೆ ನಾನ್ಯಾಕೆ ಕಾಯಬಾರದು ಎಂದುಕೊಳ್ಳುತ್ತಿದ್ದೆ. ಅಲ್ಲದೇ ಒಳ್ಳೆಯ ಸಿನಿಮಾ ಮಾಡುತ್ತಿದ್ದೇವೆ, ಎಷ್ಟೇ ತಡವಾದರೂ ಇದು ನಮಗೆ ಒಳ್ಳೆಯದನ್ನು ಮಾಡುತ್ತದೆ ಎಂಬ ನಂಬಿಕೆ ಇತ್ತು. ನಮ್ಮ ನಂಬಿಕೆ ಚಿತ್ರಮಂದಿರಗಳಲ್ಲಿ ನಿಜವಾಗಲಿಲ್ಲ. ಆದರೆ ನಂತರ ಓಟಿಟಿ ವೇದಿಕೆಯಲ್ಲಿ ನಿಜವಾಯ್ತು' ಎನ್ನುವ ಅವರು, 'ಲಾಕ್‌ಡೌನ್ ಎನ್ನುವುದು ನಮಗೆ ಒಂದು ರೀತಿಯಲ್ಲಿ ವರದಾನ ಆಯಿತು' ಎಂದೂ ಒಪ್ಪಿಕೊಳ್ಳುತ್ತಾರೆ.

'ದಿಯಾ' ಸಿನಿಮಾ ಸಹಿ ಮಾಡಿದ ನಂತರ ಅವರು ಸುಮ್ಮನೆ ಏನೂ ಕೂತಿರಲಿಲ್ಲ. 2014ರಲ್ಲಿಯೇ ಒಂದು ತುಳು ಸಿನಿಮಾ ಮಾಡಿದರು. ನಂತರ 'ಜಿ ಕನ್ನಡ'ದಲ್ಲಿ ಪ್ರಸಾರವಾಗುತ್ತಿದ್ದ 'ಸಾಗರ ಸಂಗಮ' ಧಾರಾವಾಹಿ ಮೂಲಕ ಕಿರುತೆರೆಯನ್ನೂ ಪ್ರವೇಶಿಸಿದರು. 'ರಾಧಾ ಕಲ್ಯಾಣ', 'ಸಾಗರ ಸಂಗಮ', 'ಲವಲವಿಕೆ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದಾರೆ. 11 ತುಳು ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. 'ದಿಯಾ' ಚಿತ್ರದ ನಿರ್ದೇಶಕರೇ 'ರಾಜರು' ಮತ್ತು 'ಡಿಕೆ ಬೋಸ್' ಸಿನಿಮಾಗಳಲ್ಲಿ ನಟಿಸುವ ಅವಕಾಶ ಕೊಡಿಸಿದರು. ಆದರೆ ಕೊನೆಗೂ ಅವರ ವೃತ್ತಿಬದುಕಿನ ದಿಕ್ಕು ಬದಲಿಸಿದ್ದು 'ದಿಯಾ' ಸಿನಿಮಾದ ಆದಿ ಪಾತ್ರವೇ.

ಈಗ ಪೃಥ್ವಿ ಅವರ ಕೈಯಲ್ಲಿ ಸಾಕಷ್ಟು ಅವಕಾಶಗಳಿವೆ. ಆದರೆ ಅವರ ಧ್ವನಿಯಲ್ಲಿನ ವಿನಯ ಚೂರೂ ಕಮ್ಮಿಯಾಗಿಲ್ಲ. ಯಶಸ್ಸಿನ ಮದ ಸೋಲಿನ ಪ್ರಪಾತಕ್ಕೆ ತಲುಪಿಸುವ ಜಾರುಬಂಡಿಯೂ ಆಗಬಲ್ಲದು ಎಂಬ ಎಚ್ಚರ ಅವರಲ್ಲಿ ಎದ್ದು ಕಾಣುತ್ತದೆ.

'ಮಮ್ಮಿ' ಖ್ಯಾತಿಯ ಲೋಹಿತ್ ನಿರ್ದೇಶನದ 'ಲೈಫ್ ಈಸ್ ಬ್ಯೂಟಿಫುಲ್' ಚಿತ್ರದಲ್ಲಿ ಪೃಥ್ವಿ ನಾಯಕನಾಗಿ ನಟಿಸುತ್ತಿದ್ದಾರೆ. 'ಇದೊಂದು ಫೀಲ್ ಗುಡ್ ಸಿನಿಮಾ. ಇಡೀ ಚಿತ್ರ ನಾಯಕನ ಪಾತ್ರದ ಸುತ್ತಲೇ ಕಟ್ಟಲ್ಪಟ್ಟಿದೆ. ಇದು ನಟನೆಗೆ ತುಂಬ ಅವಕಾಶ ಇರುವ ಸಿನಿಮಾ. ನಿರ್ದೇಶಕರು ತುಂಬ ಆರ್ಗನೈಸ್ಡ್ ಆಗಿ ಸಿನಿಮಾ ಮಾಡುತ್ತಿದ್ದಾರೆ. ಗ್ರ್ಯಾಂಡ್ ಅಲ್ಲದಿದ್ದರೂ, ತುಂಬ ಸೆನ್ಸಿಬಲ್ ಸಿನಿಮಾ' ಎಂದು ವಿವರಣೆ ನೀಡುವ ಅವರಿಗೆ, 'ಲೈಫ್ ಈಸ್ ಬ್ಯೂಟಿಫುಲ್' ಸಿನಿಮಾ ನಂತರ ತಮ್ಮ ಸಿನಿಮಾ ಲೈಫ್ ಇನ್ನಷ್ಟು ಬ್ಯೂಟಿಫುಲ್ ಆಗುತ್ತದೆ ಎಂಬ ವಿಶ್ವಾಸ ಇದೆ.

'ದಿಯಾ' ಚಿತ್ರದ ನಿರ್ದೇಶಕರು ಮೊದಲು ಹಾರರ್ ಸಿನಿಮಾ ಮಾಡಿದವರು. ಲೋಹಿತ್ ಕೂಡ ಹಾರರ್ ಸಿನಿಮಾ ಮೂಲಕವೇ ಪ್ರಸಿದ್ಧರಾದವರು. 'ಹಾರರ್ ಸಿನಿಮಾ ಡೈರೆಕ್ಟರ್‌ಗಳೇ ನನ್ನನ್ನು ಹಾಕಿಕೊಂಡು ಸಿನಿಮಾ ಮಾಡ್ತಾರೆ. ಆದರೆ ಹಾರರ್ ಸಿನಿಮಾ ಮಾಡಲ್ಲ' ಎಂದು ನಗುತ್ತಾರೆ ಪೃಥ್ವಿ.

ಶಶಿಧರ ಕೆ.ಎಂ. ಅವರ ನಿರ್ದೇಶನದ 'ಶುಗರ್‌ಲೆಸ್' ಅವರು ಸಹಿ ಮಾಡಿರುವ ಇನ್ನೊಂದು ಸಿನಿಮಾ. ಇದು ಮಧುಮೇಹ ಕಾಯಿಲೆಯ ಸುತ್ತಲೂ ಕಟ್ಟಿರುವ ವಿಭಿನ್ನ ಕಥೆಯಂತೆ. ಹಾಗೆಯೇ 'ಫಾರ್ ರಿಜಿಸ್ಟ್ರೇಷನ್' ಎಂಬ ಇನ್ನೊಂದು ವಿಭಿನ್ನ ಹೆಸರಿನ ಸಿನಿಮಾದಲ್ಲಿಯೂ ಪೃಥ್ವಿ ನಟಿಸುತ್ತಿದ್ದಾರೆ.

'ದಿಯಾದಲ್ಲಿ ನನಗೆ ಯಶಸ್ಸು ಸಿಕ್ಕಿತು. ಆದರೆ ಯಶಸ್ಸನ್ನು ಎನ್‌ಕ್ಯಾಶ್ ಮಾಡಿಕೊಳ್ಳುವುದು ನನಗೆ ಒಪ್ಪಿತವಲ್ಲ. ಹಾಗಾಗಿ ಮತ್ತೆ ದಿಯಾ ಚಿತ್ರದ ಪಾತ್ರವನ್ನೇ ಹೋಲುವ ಪಾತ್ರ ಬಂದರೆ ನಟಿಸಬಾರದು ಎಂದುಕೊಂಡಿದ್ದೆ. ಅದೃಷ್ಟವಶಾತ್ ನನಗೆ ಅಂಥ ಪಾತ್ರ ಬರಲೂ ಇಲ್ಲ. ನಾನು ಈಗ ಒಪ್ಪಿಕೊಂಡ ಸಿನಿಮಾಗಳೆಲ್ಲವುಗಳಲ್ಲೂ ಆದಿ ಪಾತ್ರಕ್ಕಿಂತಲೂ ತುಂಬ ಬೇರೆ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ' ಎನ್ನುವ ಪೃಥ್ವಿ ಅವರ ಭಿನ್ನ ಪಾತ್ರಗಳ ಹಂಬಲ ಎಷ್ಟಿದೆಯೆಂದರೆ ನಾಯಕನ ಪಾತ್ರವನ್ನೇ ಮಾಡುತ್ತೇನೆ ಎಂಬ ಹಟವನ್ನೂ ಅವರು ಹಿಡಿದು ಕೂತಿಲ್ಲ. ಸದ್ಯದಲ್ಲಿಯೇ ಸೆಟ್ಟೇರಲಿರುವ ಇನ್ನೊಂದು ಸಿನಿಮಾದಲ್ಲಿ ಅವರು ಖಳನಟನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ.

ಚಿತ್ರತಂಡ, ಸ್ಕ್ರಿಪ್ಟ್ ಮತ್ತು ತನ್ನ ಪಾತ್ರ ಈ ಮೂರು ಅಂಶಗಳನ್ನು ನೋಡಿಕೊಂಡು ಅವರು ಯಾವುದೇ ಸಿನಿಮಾ ಒಪ್ಪಿಕೊಳ್ಳಬೇಕೋ ಬೇಡವೋ ಎಂದು ನಿರ್ಧರಿಸುತ್ತಾರೆ. ಒಮ್ಮೆ ತೊಟ್ಟ ಅಸ್ತ್ರವನ್ನು ಮತ್ತೆ ತೊಡಲಾರೆ ಎಂಬ ಕರ್ಣನ ಭಾಷೆಯಂತೆ, ಒಮ್ಮೆ ಕಾಣಿಸಿಕೊಂಡಂಥ ಪಾತ್ರದಲ್ಲಿ ಮತ್ತೆ ಮತ್ತೆ ನಟಿಸಲಾರೆ ಎಂದು ಅವರು ತಮಗೆ ತಾವೇ ಭಾಷೆ ಕೊಟ್ಟುಕೊಂಡಿದ್ದಾರೆ.

ಬಣ್ಣದ ಬದುಕಿನ ಕೆಲಸದ ನಡುವೆ ಚೂರು ಬಿಡುವು ಸಿಕ್ಕರೂ ಸಾಕು, ಪೃಥ್ವಿಗೆ ವಸುಂಧರೆಯ ಹಸಿರ ಸೆರಗಲ್ಲಿ ಕಳೆದುಹೋಗುವ ಬಯಕೆಯಾಗುತ್ತದೆ. ಬೈಕ್ ಹತ್ತಿ ಬೆಟ್ಟ ಕಾಡುಗಳ ಒಡಲೊಳಗೆ ಹೊರಟುಬಿಡುತ್ತಾರೆ. ಸಂಗೀತ ಕೇಳುತ್ತ, ಒಬ್ಬಂಟಿಯಾಗಿ ಬೈಕ್‌ನಲ್ಲಿ ಅಲೆಯುವುದು ಅವರ ಮನಸ್ಸಿಗೆ ಅತ್ಯಂತ ಮುದನೀಡುವ ಸಂಗತಿ. ಇದನ್ನು ಬಿಟ್ಟರೆ ಪುಸ್ತಕ ಓದುವುದು, ಡಾನ್ಸ್ ಅವರ ಪಾಲಿಗೆ ಮನಸ್ಸಿಗೆ ಉತ್ಸಾಹದ ಇಂಧನವನ್ನು ತುಂಬುವ ತುಂಬುಗಟ್ಟೆಗಳು.



# ರಾಗಣ್ಣ 25

'ಅಮ್ಮನ ಮನೆ' ಸದಭಿರುಚಿಯ ಸಿನಿಮಾದ ಜೊತೆಗೆ ಕಮ್‌ಬ್ಯಾಕ್ ಮಾಡಿದ್ದ ರಾಘವೇಂದ್ರ ರಾಜ್‌ಕುಮಾರ್, ಅದರ ನಂತರ ಒಂದರ ಹಿಂದೊಂದು ಸಿನಿಮಾಗಳಲ್ಲಿ ನಟಿಸುತ್ತಲೇ ಇದ್ದಾರೆ. ಕೊರೊನಾ ನಂತರ ಸಂಪೂರ್ಣ ಸ್ಥಗಿತಗೊಂಡಿದ್ದ ಚಿತ್ರರಂಗ ಇದೀಗ ಮತ್ತೆ ಗರಿಗೆದರಲು ಶುರುವಾಗಿದೆ. ರಾಘಣ್ಣ ಕೂಡ ಮತ್ತೆ ಸಿನಿಮಾ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.

ಫಣೀಶ್ ಭಾರಾದ್ವಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ 'ಆಡಿಸಿದಾತ' ರಾಘಣ್ಣನ 25ನೇ ಸಿನಿಮಾ. ಈಗಾಗಲೇ ಎರಡು ಹಾಡು ಮತ್ತು ಕೆಲವು ಮಾತಿನ ಭಾಗದ ಚಿತ್ರೀಕರಣವೂ ಮುಗಿಸಿದ್ದ ಚಿತ್ರತಂಡ ಕೊರೊನಾ ಕಾರಣಕ್ಕೆ ಕೆಲಸ ನಿಲ್ಲಿಸಿತ್ತು. ಇದೀಗ ಚಿತ್ರದ ಟೀಸರ್ ಬಿಡುಗಡೆ ಮಾಡಿ ಮತ್ತೆ ಕೆಲಸ ಪ್ರಾರಂಭಿಸುವ ಸಿದ್ಧತೆಯಲ್ಲಿದೆ.

ಇತ್ತೀಚೆಗೆ ಪುನೀತ್ ರಾಜ್‌ಕುಮಾರ್ ಚಿತ್ರದ ಟೀಸರ್ ಅನ್ನು ನೋಡಿ ಮೆಚ್ಚಿಕೊಂಡು ರಿಲೀಸ್ ಮಾಡಿದ್ದಾರೆ. ಗ್ರಾಫಿಕ್ ತಂತ್ರಜ್ಞಾನ ಬಳಸಿಯೇ ರೂಪಿಸಿರುವ ಟೀಸರ್‌ನಲ್ಲಿ, ರಾಘಣ್ಣ ಈ ಚಿತ್ರದಲ್ಲಿ ಮಾಸ್ ಅವತಾರದಲ್ಲಿಯೂ ಕಾಣಿಸಿಕೊಳ್ಳುವ ಸೂಚನೆ ಇದೆ.

ಎಚ್. ಹಾಲೇಶ್ ಬಂಡವಾಳ ಹೂಡಿರುವ ಈ ಚಿತ್ರಕ್ಕೆ ಕದ್ರಿ ಮಣಿಕಾಂತ್ ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಜೊತೆಗೆ ಭಗವಾನ್, ಗುರುದತ್, ಬಾಲರಾಜ್, ಸುಶ್ಮಿತಾ ದಾಮೋದರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್